Mr. SPEAKER.—They are distant enough not to quarrel.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಾಮಾನ್ಯವಾಗಿ ಆದಿಶಕ್ತಿ ಒಳ್ಳೆಯರೂಪುತಾಳಿದರೆ ಪರವಾ ಇಲ್ಲ. ಒಂದು ವೇಳೆ ಸಪ್ತ ಮಾತೆಯರಾದ ಮಾರಿ, ಮನಣಿ, ಚಂಡಿ, ಮೋಹಿನಿ, ಮಹಿಷಾ ವರ್ಧಿನಿ ಕೋಪಿಸಿಕೊಂಡರೆ ಆಗ ಇವರ ಮಹತ್ವ ಹೆಚ್ಚು ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸಪ್ತ ಮಾತೆಯರಲ್ಲಿ ಮಾರಿ first of all these goddesses. She will be powerful. She is not afraid of other godesses.

ಶ್ರೀ ಬಿ. ಭಾಸ್ಕರಶೆಟ್ಟಿ.—ಹೊಸ ಮಾರೀಗುಡಿ ಸರ್ಕಾರದ ಕಂಟ್ರೋಲಿನಲ್ಲಿಲ್ಲವೆಂದು ಈಗ ತಾನೇ ಮಾನ್ಯ ಮಂತ್ರಿಗಳು ಹೇಳಿದರು. ಇದು ಹೊಸದಾಗಿ ಆಗಿರುವುದರಿಂದ ಸುಮಾರು 10-15 ವರ್ಷಗಳಿಂದಲೂ ಈ ಮಾರೀಗುಡಿಯ ಅಭಿವೃದ್ಧಿ ಕಾರ್ಯಗಳನ್ನು ಮ್ಯಾನೇಜ್ ಮಾಡಲು ಎರಡು ಪಾರ್ಟಿಗಳವರೂ ಸರ್ಕಾರಕ್ಕೇನಾದರೂ ಅರ್ಜಿ ಹಾಕಿದ್ದಾರೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದು ತಮಗೇ ಗೊತ್ತಿದೆ. ಸುಮಾರು ಎರಡುವರ್ಷಗಳಿಂದಲೂ ಈ ವಿಚಾರವನ್ನು ಅವರ ಗಮನಕ್ಕೆ ತರುತ್ತಿದ್ದಾರೆ. ಹಳೆಯ ಮಾರಿಯಮ್ಮ ದೇವಸ್ಥಾನದ ಮ್ಯಾನೇಜ್ ಮೆಂಟ್ ಕೋರ್ಟ್‌ನಲ್ಲಿ ಆರ್ಡರ್ ಆದ ಹಾಗೆ ಕೋರ್ಟ್ ಕಂಟ್ರೋಲಿನಲ್ಲಿದೆ. They can appoint Manager. ಹೊಸ ಮಾರಿಯಮ್ಮ ದೇವಸ್ಥಾನದ ಮ್ಯಾನೇಜ್‌ಮೆಂಟನ್ನು ಶ್ರೀಮತಿ ಮಹಾಲಿಂಗ ಶೆಟ್ಟಿಯವರು ನೋಡಿಕೊಳ್ಳುತ್ತಿದ್ದಾರೆ. ಇನ್ನೊಬ್ಬರಾದ ಶ್ರೀ ಸರ್ವೋತ್ತಮ ಶೆಟ್ಟಿಯವರು ಸುಮಾರು 60 ವರ್ಷಗಳಿಂದ ಮ್ಯಾನೇಜ್‌ಮೆಂಟ್ ಮಾಡುತ್ತಿದ್ದೇನೆಂದು ಹೈ ಕೋರ್ಟಿನಿಂದ ಮೊದಲನೆಯವರ ಮೇಲೆ ಸ್ಟೇ ಆರ್ಡರ್ ತಂದಿವ್ವಾರೆ. ಆ ಸ್ಟೇ-ಆರ್ಡರನ್ನು Vacate ಮಾಡುವವರೆಗೂ, that Mariamma temple will not come under the control of Government.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಹಾಗಾದರೆ ಮಂಗಳೂರಿನಲ್ಲಿ ನಿಮ್ಮ ಕಂಟ್ರೋಲಿನಲ್ಲಿ ಎಷ್ಟು ಮಾರಿಯಮ್ಮಗಳಿವೆ ?

Mr. SPEAKER.—That will require notice.

ಶ್ರೀ ಸಂಜೀವನಾಥ ಐಕಳ.—ಈ ಮಾರಮ್ಮಗುಡಿಗಳಲ್ಲಿ ಕುರಿ; ಕೋಳಿ, ಕೋಣ ಇವುಗಳನ್ನು ಕಡಿಯಬಾರದು ಎಂಬುದಾಗಿ ಸರ್ಕಾರದವರು ಸ್ಪಿಕ್ಟಾಗಿ ನೂಚನೆಗಳನ್ನುಕೊಟ್ಟಿದ್ದರೂ ಕೆಲವು ಕಡೆಗಳಲ್ಲಿ ಆ ಕಾಯಿದೆಗಳಿಗೆ ವಿರೋಧವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Mr. SPEAKER.—How does it arise out of this question ? Let the member put another question.

Sri SANJEEVANATH AIKALA.—This Mariamma Temple violates Government Rules as it permits killing of animals.

[*No reply*]

ಶ್ರೀ ಎಸ್. ಗೋಪಾಲ ಸಾಲೆನ್ನ.—ಒಂದು ಗ್ರಾಮದಲ್ಲಿ ಈ 3 ಮಾರಿಯಮ್ಮ ದೇವಸ್ಥಾನಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನು ಪದೇ ಪದೇ ಶ್ರೀ ಭಾಸ್ಕರಶೆಟ್ಟರು ಕೇಳುತ್ತಿರುತ್ತಾರೆ. ಈ ಮೂರನ್ನೂ ಏತಕ್ಕೆ ಒಂದಾಗಿ ಸೇರಿಸಬಾರದು ?

Mr. SPEAKER.—That is disallowed.

Losses caused to the lands on account of the working of Syphons in Kanva Reservoir.

*Q.—76. Sri B. J. LINGE GOWDA (Channapatna).—

Will the Government be pleased to state :—

(*a*) whether it has not been brought to the notice of the Government that on account of the working of the Syphons in Kanva Reservoir, heavy lossess are caused to the lands situated below the Reservoir along the River Bed, as a result of sudden rush of water ?

(*b*) whether they are aware that the Kanva River Belt consists of costly and fertile garden lands which are subjected to the above damages and lossess frequently, whenever the syphons work ;

(*c*) whether it is not a fact that frequent requests have been made for providing sluice gates to Kanva Reservoir in addition to the retention of Syphons to avoid the above contingency ;

(*d*) what action has been taken by Government in this direction ?

A.—Sri ALUR HANUMANTHAPPA (Deputy Minister for Minor Irrigation).—

(*a*) No.
(*b*) No.
(*c*) No.
(*d*) Does not arise in view of reply to Clause (*c*).

ಶ್ರೀ ಬಿ. ಜೆ. ಲಿಂಗೇಗೌಡ.—ನನ್ನ ಪ್ರಶ್ನೆಗೆ "ಅ" ನಲ್ಲಿ ಗೊತ್ತಿಲ್ಲವೆಂದು ಹೇಳಿದ್ದೀರಿ. ಹಾಗಾದರೆ ಇದನ್ನು ಗೊತ್ತುಮಾಡುವ ರೀತಿ ಹೇಗೆ ?

† ಶ್ರೀ ಆಲೂರು ಹನುಮಂತಪ್ಪ.—ಈ ಜಲಾಶಯದ ಸೈಫನ್ ನಡೆಸುವುದರಿಂದ ಇದ್ದಕ್ಕಿದ್ದ ಹಾಗೆ ನೀರು ಹೆಚ್ಚಾಗಿ ನುಗ್ಗಿ ಜಮೀನುಗಳಿಗೆ ವಿಶೇಷ ನಷ್ಟವಾಗುವುದು ಎಂದು ಮಾನ್ಯನದಸ್ಯರು ತಿಳಿದುಕೊಂಡಿದ್ದಾರೆ ಅದಕ್ಕೊಸ್ಕರವೇ ಅದು ಗೊತ್ತಿಲ್ಲವೆಂದು ಉತ್ತರದಲ್ಲಿ ಹೇಳಿದೆ.

ಶ್ರೀ ಬಿ. ಜೆ. ಲಿಂಗೇಗೌಡ —ಪದೇ ಪದೇ ಈ ರೀತಿ ಅಲ್ಲಿನ ಜಮೀನುಗಳು ಹಾನಿ ಮತ್ತು ನಷ್ಟಗಳಿಗೆ ಗುರಿಯಾಗುವುದು ಹೆಚ್ಚಿಗೆ ನೀರು ಬರುತ್ತಾ ಇರುವುದರಿಂದ ಎಂಬುದು ಸರ್ಕಾರಕ್ಕೆ ಗೊತ್ತಿದೆಯೇ ? ಮತ್ತು ಪಿಕಪ್ ನಾಲೆಗಳನ್ನು ಮಾಡುವುದರಿಂದ ಈ ಜಲಾಶಯದ ಕೆಳಗೆ ನದಿಯ ಅಂಗಳದ ಕಡೆಯಿರತಕ್ಕ ಬೆಲೆ ಬಾಳುವ ಹಾಗೂ ಫಲವತ್ತಾದ ತೋಟ ಮತ್ತು ಜಮೀನುಗಳಿಗೆ ಹೆಚ್ಚು ನೀರು ಬರುವುದನ್ನು ತಪ್ಪಿಸಬಹುದಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಹೆಚ್ಚಿಗೆ ನೀರು ಬರುವುದರಿಂದ ಈ ರೀತಿ ತೊಂದರೆಯಾಗುತ್ತಾ ಇಲ್ಲ. ಹೊಸ ಪ್ರಾಜೆಕ್ಟುಗಳನ್ನು ಅಲ್ಲಿ ಹೆಚ್ಚಿಗೆ ಕಟ್ಟಬೇಕೆಂದು ಈಗಾಗಲೆ ಪ್ರಯತ್ನ ಮಾಡಿದೆ.

ಶ್ರೀ ಬಿ. ಜೆ. ಲಿಂಗೇಗೌಡ.—ಈ ಪರಿಸ್ಥಿತಿಯನ್ನು ತಪ್ಪಿಸಲು ಈ ಸೈಫನ್ನುಗಳನ್ನು ಉಳಿಸಿಕೊಳ್ಳುವುದರ ಜೊತೆಗೆ ಕಣ್ವಾ ಜಲಾಶಯಕ್ಕೆ ತೂಬುಗಳನ್ನಾದರೂ ಹಾಕಬೇಕೆಂದು ಅಲ್ಲಿನವರು ಪ್ರಾರ್ಥನೆ ಮಾಡಿಕೊಂಡಿರುವುದು ನಿಜವೇ ?

ಶ್ರೀ ಆಲೂರು ಹನುಮಂತಪ್ಪ.—ಸಾಮಾನ್ಯವಾಗಿ ರಿಜರ್ವಾಯರುಗಳಿಗೆ ತೂಬುಗಳನ್ನು ಹಾಕುವುದು ಒಂದು ಪದ್ಧತಿ. ಈ ಜಲಾಶಯಕ್ಕೆ ಅದನ್ನು ಹಾಕುವುದರಲ್ಲಿ ಸ್ವಲ್ಪಮಟ್ಟಿಗೆ ನಿಧಾನ ಮಾಡಿದ್ದಾರೆ. ಅದನ್ನು ಜಾಗ್ರತೆ ಮಾಡಿಸಲು ಪ್ರಯತ್ನ ನಡೆಸಲಾಗುತ್ತದೆ.

Mr. SPEAKER.—Question hour is over.

QUESTION FOR ANSWER ON THE DAY
(but not taken up)

Establishment of 'Bapuji Rythodaya Agricultural Co-operative Society' in Sathanoor Hobli, Kanakapura Taluk.

*Q.—87 Sri K. L. SHIVALINGE GOWDA (Virupakshipura).—

Will the Government be pleased to state :—

(*a*) when the 'Bapuji Rythodaya Agricultural Co-operative Society' was established in Sathanoor Hobli, Kanakapura together with the number of members ;